ಕ್ರಿಯೆ, ವರ್ತನೆ ಮತ್ತು ಸ್ವಭಾವವನ್ನು ವಿಶ್ಲೇಷಿಸುತ್ತದೆ. 'ಆಕ್ಟ್' ಎನ್ನುವುದು ಕ್ರಿಯೆಯನ್ನು ಸೂಚಿಸುವುದರ ಜೊತೆಜೊತೆಗೆ 'ಕಾನೂನು' ಎಂಬ ಅರ್ಥವನ್ನೂ ಹೊಂದಿದೆ. ವ್ಯವಸ್ಥೆ ಮತ್ತು ಮನುಷ್ಯ ಮನಸ್ಸಿನ ದುಷ್ಟತೆಯನ್ನು ಅರ್ಥಮಾಡಿಕೊಳ್ಳಲು ಯತ್ನಿಸುವ ಕಾದಂಬರಿಯು, 1980ರ ಘಟನೆಯಲ್ಲಿ ಸಾವಿಗೀಡಾದ ಜನರ ಸಂಖ್ಯೆಯ ಎಣಿಕೆಗೆ ಸಂಬಂಧಿಸಿದಂತೆ ನಡೆದಷ್ಟು ವಾದವಿವಾದಗಳು ಆ ಘಟನೆಯ ಪರಿಣಾಮವನ್ನು ಕುರಿತು ನಡೆಯಲಿಲ್ಲವೆಂಬ ನೋವನ್ನು ಘಟನೆಯಲ್ಲಿ ನೋವುಂಡವರ ಮುಖಾಂತರವೇ ದಾಖಲಿಸುತ್ತದೆ.

ವಿದ್ಯಾರ್ಥಿದಂಗೆಯಲ್ಲಿ ಕಾಣೆಯಾಗುವ ಡಾಂಗ್ ಹೋ ಎಂಬ ಗೆಳೆಯನ ಹೆಣದ ಹುಡುಕಾಟದಲ್ಲಿ ಆತನ ಮತ್ತೊಬ್ಬ ಗೆಳೆಯ ತೊಡಗುತ್ತಾನೆ. ದಿಕ್ಕಿಲ್ಲದ ದೇಹಕ್ಕಾಗಿ ಹುಡುಗನೊಬ್ಬ ನಡೆಸುವ ಹುಡುಕಾಟವು ಅವನ ಪ್ರಜ್ಞೆಯ ಹುಡುಕಾಟವಾಗಿ ಬೆಳೆಯುತ್ತ, ಕೊನೆಗೆ ಘಾಸಿಗೊಂಡ ನಾಡು ಕಳಕೊಂಡ ತನ್ನ ದನಿಯನ್ನು ಹಿಮ್ಮರಳಿ ಪಡೆಯುವ ಪ್ರಯತ್ನವಾಗುತ್ತದೆ. ಈ ಹಿನ್ನೆಲೆಯಲ್ಲಿ 'ಗ್ವಾಂಜು ದಂಗೆ'ಯು ಯಾವುದೋ ಒಂದು ಪ್ರದೇಶದ ನ್ಯಾಯಪರ ಹೋರಾಟವಾಗಿ ಮಾತ್ರ ನಿಲ್ಲದೆ, ಜಗತ್ತಿನೆಲ್ಲೆಡೆ ಸತ್ಯ, ನ್ಯಾಯದ ದನಿಗಳನ್ನು ಹತ್ತಿಕ್ಕುವ ವಿರುದ್ಧದ ಹೋರಾಟಕ್ಕೆ ಸಂಕೇತವಾಗುತ್ತದೆ. ಸತ್ತು ಹೋಗುತ್ತಿರುವ ನಾಡಿನ ಪ್ರಜ್ಞೆಯನ್ನು ಜೀವಂತವಾಗಿಸುವ ಈ ಕಥನವು ನಮ್ಮ ಆತ್ಮಗೌರವವನ್ನು ನಮಗೇ ಹಿಮ್ಮರಳಿಸುವ ಕಾವ್ಯಶಕ್ತಿಯನ್ನು ಪಡೆದಿದೆ.

ಗ್ವಾಂಜು ದಂಗೆಯ ಸಂದರ್ಭದಲ್ಲಿ ಅಧಿಕಾರದಲ್ಲಿದ್ದ ಪಾರ್ಕ್ ಚುಂಗ್–ಹೀಯ ಮಗಳು ಪಾರ್ಕ್ ಗೆನ್‌ಹೇ, 2013ರಲ್ಲಿ ದಕ್ಷಿಣ ಕೊರಿಯಾದ ಅಧ್ಯಕ್ಷೆಯಾದಾಗ ಹಾನ್ ಕಾಂಗ್‌ರೊಳಗೆ ಚರಿತ್ರೆಯ ಘಟನೆಗಳು ಮರುಕಳಿಸಿ 'ಹ್ಯೂಮನ್ ಆಕ್ಟ್ಸ್' ಕಾದಂಬರಿ ರೂಪ ಪಡೆಯಿತು. ಹಾನ್ ಕಾಂಗ್ರ ಹಾಗೆಯೇ ಅನ್ನಿಸಿರಬಹುದಾದ ಎಷ್ಟೊಂದು ಜನರ ಭಾವನೆ, ಆಲೋಚನೆಗಳಿಗೆ ಈ ಕಾದಂಬರಿ ದನಿಯಾಗಿದೆ ಎನಿಸುತ್ತದೆ. ಇದರ ಜೊತೆಗೆ, ತನ್ನ ನಾಡಿನಲ್ಲಾಗುತ್ತಿರುವ ಪ್ರಸ್ತುತ ರಾಜಕೀಯ ಬೆಳವಣಿಗೆಗಳಿಗೆ ಈಕೆಯ ಬರಹವು ವೈಯಕ್ತಿಕ ಮತ್ತು ರಾಜಕೀಯ ಪ್ರತಿಕ್ರಿಯೆಯಾಗಿ ಕಾಣಿಸುತ್ತದೆ. ಊರಿನ ಕೇಂದ್ರಭಾಗದಲ್ಲಿರುವ ಕಟ್ಟಡವೊಂದರಲ್ಲಿ ದಂಗೆಯಲ್ಲಿ ಜೀವಕಳೆದುಕೊಂಡವರ ಹೆಣಗಳನ್ನು ರಾಶಿ ಹಾಕಿದ್ದಾರೆ. ಒಬ್ಬ ಹುಡುಗ ತನ್ನ ಗೆಳೆಯನ ಹೆಣದ ಹುಡುಕಾಟದಲ್ಲಿ ತೊಡಗಿರುವ ಕ್ರಿಯೆಯಿಂದ ಕಾದಂಬರಿ ಆರಂಭವಾಗಿ, ಮನುಷ್ಯ ಸ್ವಭಾವದೊಳಗಿನ ವೈರುಧ್ಯಗಳನ್ನು ಅವಲೋಕಿಸುತ್ತ, ಕಾಣೆಯಾದ ಹುಡುಗನ ಶವವನ್ನು ಸ್ಮಶಾನದಲ್ಲಿ ಕಂಡುಕೊಳ್ಳುವುದರೊಂದಿಗೆ ಮುಕ್ತಾಯಗೊಳ್ಳುತ್ತದೆ. ನಗರದ ಕೇಂದ್ರದಿಂದ ಅಂಚಿನಲ್ಲಿರುವ ಸ್ಮಶಾನದ ಕಡೆಗೆ ನಡೆಯುತ್ತ ಸಾಗುವ ಕಥನವು ಲೇಖಕಿಯ ಆಶಯ ಮತ್ತು ಧೋರಣೆಗಳನ್ನು ಸಂಕೇತಿಸುವಂತಹದ್ದು.

ಎದ್ದು ಕಾಣುವಂತಹ ಕೆನ್ನೆಮೂಳೆಯೊಳಗೆ 'ನೋವಿನ ಮೂಲ ಇಲ್ಲೇ ಇದೆ' ಎನ್ನುವಂತೆ ಮಲಗಿರುವ ಪುಟ್ಟ ಕಣ್ಣು; ಹೇಳುವುದನ್ನೆಲ್ಲ ಹೇಳಿದ ಮೇಲೂ ತನ್ನೊಳಗೆ ಎಲ್ಲವನ್ನೂ ಉಳಿಸಿಕೊಂಡಂಥ ಮಾತು; ಆಡಿದರೆ ಗಾಳಿ ನೋಯುತ್ತದೇನೋ ಎನ್ನುವಷ್ಟು ಹಗುರ ದನಿಯೊಳಗೆ ಇಡೀ ನಾಡಿನ ಸಂಕಟ... ಹಾನ್ ಕಾಂಗ್‌ರ ಸಂದರ್ಶನ ಮತ್ತು ಫೋಟೊಗಳನ್ನು ನೋಡಿದಾಗ ನನಗೆ ಅನ್ನಿಸಿದ್ದು ಹೀಗೆ. ಈಕೆಯ ಕೃತಿಗಳನ್ನು ಓದುವಾಗ ದಕ್ಷಿಣ ಕೊರಿಯಾದ ಶತಶತಮಾನಗಳ ಸಂಕಟವೆಲ್ಲ ಮಡುಗಟ್ಟಿ ಹಾನ್ ಕಾಂಗ್‌ರಲ್ಲಿ ಒಡಮೂಡಿದೆಯೇನೋ ಅನ್ನಿಸಿದರೆ ಆಶ್ಚರ್ಯವಿಲ್ಲ. 2016ರ ಮ್ಯಾನ್ ಬುಕರ್ ಪ್ರಶಸ್ತಿಯನ್ನು 'ದ ವೆಜಿಟೇರಿಯನ್'